# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:25/03/2021 ರಂದು **ಮಧ್ಯಾಹ್ನ:2.30** ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೇಗೂರು ವಾರ್ಡ್ ಸಂಖ್ಯೆ-192 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ನೀಲಕಂಠಯ್ಯ.ಕೆ.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಸಮ್ಮುಖದಲ್ಲಿ ಅವರ ಅಧ್ಯಕ್ಷತೆಯೊಂದಿಗೆ ಬೇಗೂರು ಉಪ-ವಿಭಾಗದ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಚಲುವರಾಜು.ಎಸ್. ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ-192 ಬೇಗೂರು ರವರು ಸಭೆಗೆ ಹಾಜರಾಗಿದ್ದಂತಹ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಕೋವೀಡ್ ವ್ಯಾಕ್ಸಿನ್ ಲಸಿಕೆಗಳನ್ನು ಹಾಕಿಸಿಕೊಳ್ಳಲು ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸುವ ಬಗ್ಗೆ.
2. ಕೋವಿಡ್-19 ಟೆಸ್ಟ್‌ಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಮುಂದುವರೆಸುವ ಬಗ್ಗೆ.
3. ಕುಡಿಯುವ ನೀರು ಸರಬರಾಜು ಬಗ್ಗೆ,
4. ಘನತ್ಯಾಜ್ಯ ಬ್ಲಾಕ್‌ಸ್ಪಾಟ್‌ಗಳನ್ನು ತೆರವು ಮಾಡುವ ಬಗ್ಗೆ,
5. ವಾರ್ಡ್‌ನ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ,
6. ಬೀದಿ ದೀಪಗಳ ನಿರ್ವಹಣೆಯ ಬಗ್ಗೆ,
7. ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ,

**ವಾರ್ಡ್ ನಂ-192 ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ಸೂಚಿಸಿರುವವರ ವಿವರ**

| ಕ್ರ.ಸಂ | ಹೆಸರು | ಹುದ್ದೆ | ಹಾಜರಾತಿ |
|---|---|---|---|
| 1 | ಶ್ರೀ.ನೀಲಕಂಠಯ್ಯ.ಕೆ.ಪಿ. | ಅಧ್ಯಕ್ಷರು/ನೋಡಲ್ ಅಧಿಕಾರಿಗಳು | ಹಾಜರಾಗಿರುತ್ತಾರೆ |
| 2 | ಶ್ರೀ.ಚಲುವರಾಜು.ಎಸ್. | ಕಾರ್ಯದರ್ಶಿ (ಕಿ.ಅ.) | ಹಾಜರಾಗಿರುತ್ತಾರೆ |
| 3 | ಶ್ರೀ.ಶ್ರೀಧರ್.ಎಸ್. | ಹಿ.ಆ.ಪ | ಹಾಜರಾಗಿರುತ್ತಾರೆ |
| 4 | ಶ್ರೀ.ಆರ್.ಕುಮಾರ್ | ಬೆಸ್ಕಾಂ. ಸ.ಕಾ.ಅ. | ಹಾಜರಾಗಿರುತ್ತಾರೆ |
| 5 | ಶ್ರೀಮತಿ.ವಿನಯಕುಮಾರಿ | ಸ.ಕಾ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಾಗಿರುತ್ತಾರೆ |
| 6 | ಶ್ರೀ.ರಮೇಶ್ | ಸ.ಕಾ.ಅ. ಬೀದಿ ದೀಪ ಇಲಾಖೆ | ಹಾಜರಾಗಿರುತ್ತಾರೆ |
| 7 | ಶ್ರೀ.ಸಂತೋಷ್ ದೀಮು | ಅರಣ್ಯ | ಹಾಜರಾಗಿರುತ್ತಾರೆ |
| 8 | ಶ್ರೀ.ಮಂಜುನಾಥ್ | ಸರ್ಕಲ್ ಇನ್ಸ್‌ಪೆಕ್ಟರ್, ಬೇಗೂರು | ಹಾಜರಾಗಿರುತ್ತಾರೆ |
| 9 | ಶ್ರೀ.ಬಾಲಾಜಿ | ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) | ಹಾಜರಾಗಿರುತ್ತಾರೆ |
| 10 | ಶ್ರೀ.ರಮೇಶ್ | ಸ.ಕಾ.ನಿ.ಅ. (ರ.ಮು.ಸೌ) | ಹಾಜರಾಗಿರುತ್ತಾರೆ |

Scanned with CamScanner

| | | | |
|---|---|---|---|
| 11 | ಶ್ರೀ.ರಮೇಶ್.ಎಲ್. | ಕೆ.ಆ.ಪ. | ಹಾಜರಾಗಿರುತ್ತಾರೆ |
| 12 | ಶ್ರೀ.ರವಿ | ಬೀದಿ ದೀಪ ನಿರ್ವಹಣೆ | ಹಾಜರಾಗಿರುತ್ತಾರೆ |
| 13 | ಶ್ರೀ.ನರಸಪ್ಪ | ತೋಟಗಾರಿಕೆ ಇಲಾಖೆ | ಹಾಜರಾಗಿರುತ್ತಾರೆ |
| 14 | ಶ್ರೀ.ರಂಗಪ್ಪ ಸ.ಅ. | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಾಗಿರುತ್ತಾರೆ |
| 15 | ಶ್ರೀ.ರಮೇಶ್ | ಸದಸ್ಯರು | ಹಾಜರಾಗಿರುತ್ತಾರೆ |
| 16 | ಶ್ರೀ.ಎಸ್.ಸಚಿನ್ | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 17 | ಶ್ರೀ.ಕೃಷ್ಣ.ಎನ್. | ಡಿ.ಎಸ್.ಎಸ್.(ವರಧಿಗಾರರು) | ಹಾಜರಾಗಿರುತ್ತಾರೆ |
| 18 | ಶ್ರೀ.ಮಹೇಶ್ ಚಂದ್ರ | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 19 | ಶ್ರೀ.ಶಿವಕುಮಾರ್.ಎ.ಪಿ. | ಸಹಾಯಕ ಅಭಿಯಂತರರು | ಹಾಜರಾಗಿರುತ್ತಾರೆ |
| 20 | ಶ್ರೀ.ಡಿ.ಸುಂದರಯಯ | ಸಹಾಯಕ ಕಾರ್ಯಪಾಲಕ ಅಭಿಯಂತರರು | ಹಾಜರಾಗಿರುತ್ತಾರೆ |
| 21 | ಶ್ರೀ.ವೇಣುಗೋಪಾಲ್ | ಸಾರ್ವಜನಿಕರು | ಹಾಜರಾಗಿರುತ್ತಾರೆ |

## ಸಭೆಯ ನಡಾವಳಿಗಳು

1. ವಾರ್ಡ್ ನಂ-192 ಬೇಗೂರು ವ್ಯಾಪ್ತಿಯಲ್ಲಿ ಕೋವಿಡ್-19 ಮಹಾಮಾರಿ ಸಾಂಕ್ರಾಮಿಕ ರೋಗ 2ನೇ ಹಂತದಲ್ಲಿ ಹರಡುತ್ತಿದ್ದು, ಮುಂಜಾಗೃತಾ ಕ್ರಮವಾಗಿ ಕೋವೀಡ್ ವ್ಯಾಕ್ಸಿನ್ ಲಸಿಕೆಗಳನ್ನು ಹಾಕಿಸಿಕೊಳ್ಳಲು ವಾರ್ಡ್ ವ್ಯಾಪ್ತಿಯಲ್ಲಿ 60 ವರ್ಷ ಮೇಲ್ಪಟ್ಟ ಸಾರ್ವಜನಿಕರು ಹಾಗೂ ಬಿ.ಪಿ & ಶುಗರ್ ಇರುವಂತಹ 45 ರಿಂದ 59 ವರ್ಷದ ಸಾರ್ವಜನಿಕರಿಗೆ ಕೋವಿಡ್ ವ್ಯಾಕ್ಸಿನ್ ಚುಚುಮದ್ದು ನೀಡಲು ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಸೂಚಿಸಿದರು.

2. ಕೋವಿಡ್-19 ಟೆಸ್ಟ್‌ಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಮುಂದುವರೆಸುವಂತೆ ಅಧ್ಯಕ್ಷರು ವೈದ್ಯಾಧಿಕಾರಿರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು

ಕ್ರಮ: ವೈದ್ಯಾಧಿಕಾರಿಗಳು, ಬೇಗೂರು, ಪ್ರಾಥಮಿಕ ಆರೋಗ್ಯ ಕೇಂದ್ರ.

3. ವಾರ್ಡ್ ನಂ-192 ಬೇಗೂರು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಈ ಬಗ್ಗೆ ದೂರು ಬರದಿರುವಂತೆ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ನೀರು ಸರಬರಾಜು ಗುತ್ತಿಗೆದಾರರನ್ನು ಕರೆದು ಸೂಚನೆ ನೀಡುವಂತೆ ಹಾಗೂ ವಾಟರ್‌ಮ್ಯಾನ್‌ಗಳು ಪ್ರತಿದಿನ ಈ ಬಗ್ಗೆ ವರದಿಯನ್ನು ವಾರ್ಡ್‌ನ ಸಹಾಯಕ ಅಭಿಯಂತರರು ಪಡೆಯುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192

Scanned with CamScanner

4. ಸದರಿ ವಾರ್ಡ್‌ನ ಪರಿವೀಕ್ಷಣಾ ಸಮಯದಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸದಿರುವ ಬಗ್ಗೆ ಹಾಗೂ ದೈನಂದಿನ ಕಸ ಸಂಗ್ರಹಣೆ ಮಾಡದಿರುವ ಬಗ್ಗೆ ಹಾಗೂ ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಹಾಗೂ ಘನತ್ಯಾಜ್ಯದ ಬ್ಲಾಕ್‌ಸ್ಪಾಟ್‌ಗಳನ್ನು ತೆರವು ಮಾಡಲು ನೋಡಲ್ ಅಧಿಕಾರಿಗಳು ಸೂಚಿಸಿದರು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು(ಘನತ್ಯಾಜ್ಯ ನಿರ್ವಹಣಾ ಘಟಕ)

5. ಸಾರ್ವಜನಿಕರ ಕುಂದು ಕೊರತೆಗಳಲ್ಲಿ ಅಕ್ಷಯನಗರದ ಸಾರ್ವಜನಿಕರು ರಸ್ತೆಯನ್ನು ನಿರ್ಮಾಣ ಮಾಡಿಕೊಡಬೇಕೆಂದು ಸಭೆಯಲ್ಲಿ ಹಾಜರಾಗಿದ್ದಂತಹ ಸಾರ್ವಜನಿಕರು ಕೋರಿದ್ದು ಈ ಬಗ್ಗೆ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192 ರವರು ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

7. ವಾರ್ಡ್ ವ್ಯಾಪ್ತಿಯಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಗುರುತಿಸಿ ಮುಚ್ಚುವ ಕಾರ್ಯವನ್ನು ಮುಂದುವರೆಸಲು ಸಾರ್ವಜನಿಕರು ಕೋರಿಕೊಂಡಿರುತ್ತಾರೆ ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಹಾಜರಾಗಿದ್ದಂತಹ ವಾರ್ಡ್‌ನ ಸಹಾಯಕ ಅಭಿಯಂತರರು ರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192, ಬೇಗೂರು, ಬಿ.ಬಿ.ಎಂ.ಪಿ

8. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಡ್ಯುಯೋ ಹೈಟ್ಸ್ ಬಡಾವಣೆಯಲ್ಲಿ ರಸ್ತೆಯನ್ನು ಅಗೆದು ಹಾಳು ಮಾಡುತ್ತಿದ್ದಾರೆಂದು ಸಭೆಯಲ್ಲಿ ಹಾಜರಿದ್ದಂತಹ ಸಾರ್ವಜನಿಕರು ತಿಳಿಸಿದರು, ನೋಡಲ್ ಅಧಿಕಾರಿಗಳು ವಾರ್ಡ್‌ನ ಸಹಾಯಕ ಅಭಿಯಂತರರು ರವರಿಗೆ ಸದರಿ ವಿಷಯಕ್ಕೆ ಸಂಬಂದಿಸಿದಂತೆ ಕ್ರಮವಹಿಸಲು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192, ಬೇಗೂರು, ಬಿ.ಬಿ.ಎಂ.ಪಿ

9. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಾಳೇನ ಅಗ್ರಹಾರದಲ್ಲಿ ಚರಂಡಿ ವ್ಯವಸ್ಥೆಯು ಸರಿಯಿಲ್ಲವೆಂದು ಸಭೆಯಲ್ಲಿ ಹಾಜರಿದ್ದಂತಹ ಸಾರ್ವಜನಿಕರು ತಿಳಿಸಿದರು, ನೋಡಲ್ ಅಧಿಕಾರಿಗಳು ವಾರ್ಡ್‌ನ ಸಹಾಯಕ ಅಭಿಯಂತರರು ರವರಿಗೆ ಸದರಿ ವಿಷಯಕ್ಕೆ ಸಂಬಂದಿಸಿದಂತೆ ಕ್ರಮವಹಿಸಲು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192, ಬೇಗೂರು, ಬಿ.ಬಿ.ಎಂ.ಪಿ

Scanned with CamScanner